ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 20.02.2025

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ

ಮನೆ ಕಟ್ಟಲು ನಾನು ಲೈಸನ್ಸ್ ನ್ನು ಪಡೆದುಕೊಂಡಿರುತ್ತೇನೆ. ಕಟ್ಟಡದ ನಕ್ಷೆಯನ್ನು ತಯಾರಿಸಿ ಪಂಚಾಯಿತಿಯಿಂದ ಅನುಮೋದನೆ ಪಡೆದುಕೊಂಡಿರುವುದಿಲ್ಲ. ಸದರಿ ಲೈಸನ್ಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಕಟ್ಟಿದ ಮನೆಯನ್ನು ಖರೀದಿ ಮಾಡಿರುತ್ತೇವೆಂದು ನುಡಿಯುತ್ತರೆ .

ನಿಮ್ಮ ಮುಖ್ಯ ವಿಚಾರಣೆಯಲ್ಲಿ 3 ನೇ ಪ್ಯಾರದಲ್ಲಿ " ನಾನು ಷೆಡ್ಯೂಲ್ ಸ್ವತ್ತನ್ನು ಖರೀದಿಸಿದ ನಂತರ ಹಳೆಯ ಶಿಥಿಲವಾದ ಮನೆಯನ್ನು ಕೆಡವಿ ಹಾಕಿ ಹೊಸ ಕಟ್ಟಡವನ್ನು ಕಟ್ಟಿಸಿರುತ್ತೇನೆ " ಎಂದು ಬರೆಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿ ಯುತ್ತಾರೆ .

ನಿಮ್ಮ ಮುಖ್ಯ ವಿಚಾರಣೆಯಲ್ಲಿ 4 ನೇ ಪ್ಯಾರದಲ್ಲಿ " ನನ್ನ ಮನೆಯ ಪಶ್ಚಿಮ ಗೋಡೆ (ಮುಂಭಾಗದ ಜಾಗ ) ಒಂದುವೆಂಟಿಲೇಟರ್ ಇರುತ್ತದೆ ನನ್ನ ಮನೆಯ ಅಡುಗೆ ಮನೆ ಮತ್ತು ಊಟ ಮನೆಯ ಹಾಲ್ ನಲ್ಲಿ ತಲಾ ಒಂದೊಂದು ಕಿಟಕಿಗಳು , ಗಾಳಿ ಮತ್ತು ಬೆಳಕು ಉದ್ದೇಶಗಳಿಂದ ಇಡಿಸಿರುತ್ತಾರೆ " ಎಂದು ಬರೆಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಡುಗೆ ಮನೆಯಲ್ಲಿ ಮಾತ್ರ ಒಂದು ಕಿಟಕಿ ಇರುತ್ತದೆ ಎಂದು ನುಡಿಯುತ್ತಾರೆ. ಅಡುಗೆ ಮನೆಯ ಕಿಟಕಿ ಮೇಲೆ ಸಜ್ಜಾ ಇರುವುದಿಲ್ಲ . ನಾನು ಒಟ್ಟು 30 x 52 ಜಾಗ ಖರೀದಿ ಮಾಡಿರುತ್ತೇನೆ. ಈ ವಿಚಾರವನ್ನು ನಾನು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ. ಸದರಿ ಜಾಗ ಖರೀದಿಸಿದ ಬಗ್ಗೆ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ವಕೀಲರ ಮುಖಾಂತರ ನೀಡಿದ ನೋಟೀಸನಲ್ಲಿ ಪ್ರತಿವಾದಿಯರು 1 ನೇ ದಾವಾ ಸ್ವತ್ತಿನ ಪೂರ್ವ ದಿಕ್ಕಿನ ಕಡೆ ಇರುವ ಕಿಟಕಿಗೆ ಸಂಬಂಧಿಸಿದಂತೆ ತೊಂದರೆ ನೀಡುತ್ತಿದ್ದಾರೆಂದು ಹೇಳಿ ಬರೆಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ .

ನೀವು ಇಲ್ಲದೇ ಇರುವ ಸಂರ್ಭದಲ್ಲಿ ಪ್ರತಿವಾದಿಯರು ಮನೆ ಕಿಟ್ಟಿರುತ್ತಾರೆ ಎ ಂದುಹೇಳಿದ್ದು ನಿಮ್ಮ ಪ್ರಕಾರ ಅವರು ಯಾವ ಇಸವಿಯಲ್ಲಿ ಮನೆ ಕಟ್ಟಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 2015 ನೇ ಇಸವಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ . ಸಾಕ್ಷಿಯು ಮುಂದುವರೆದು ನಿಖರವಾದ ದಿನಾಂಕ ನೆನಪಿಲ್ಲ ಎಂ ದು ನುಡಿಯುತ್ತಾರೆ . ಆ ಸಂದರ್ಭದಲ್ಲಿ ನಾನು 2 ದಿನಗಳ

ಕಾಲ ಮನೆಯಲ್ಲಿ ಇರಲಿಲ್ಲ. 2 ದಿವಸಗಳಲ್ಲಿಯೇ ಪ್ರತಿವಾದಿಯರು ಮನೆ ಮತ್ತು ಕಾಂಪೌಂಡ್ ಕಟ್ಟಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ಬೇಸ್ ಮೆಂಟ್ ಹಾಕದೆಯೇ ಗಾರೆ ಇಟ್ಟಿಗೆಯನ್ನು ಇಟ್ಟು ದನದ ಕೊಟ್ಟಿಗೆಯನ್ನು ಕಟ್ಟಿರುತ್ತಾರೆಂದು ನುಡಿಯುತ್ತಾರೆ. ನಮ್ಮ ಮತ್ತು ಪ್ರತಿವಾದಿಯ ಮನೆಯ ನಡುವೆ ಮುಕ್ಕಾಲು ಅಡಿ ಅಷ್ಟು ಅಂತರವಿರುತ್ತದೆ. ಪ್ರತಿವಾದಿಯರು ಅವರಿಗೆ ಸೇರಿದ ಜಾಗದಲ್ಲಿ 3 ಅಡಿ ಬಿಟ್ಟು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ನೇ ದಾವ ಸ್ವತ್ತಿಗೆ ಸಂಬಂಧಿಸಿದಂತೆ ನೀವು ಪ್ರತಿವಾದಿಗೆ ಸೇರಿದ ಸ್ವತ್ತಿಗೆ ಚಾಚಿದಂತೆ ಸಜ್ಜಾವನ್ನು ನಿರ್ಮಿಸಿಕೊಂಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಪಿ 1 ಕ್ರಯಪತ್ರದಲ್ಲಿ ಪೂರ್ವಕ್ಕೆ ಖಾಸಗಿಯವರ ಖಾಲಿ ಜಾಗ ಎಂದು ಬರೆದಿದ್ದು ಅದು ಯಾರ ಖಾಲಿ ಜಾಗ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮದೆ ಖಾಲಿ ಜಾಗ ಎಂದು ನುಡಿಯುತ್ತಾರೆ .

(ಈ ಹಂತದಲ್ಲಿ ಮಾನ್ಯ 2 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.